# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 33

ಸ್ವಾಮಿ ನಿತ್ಯಸ್ಥಾನಂದ

### ಶ್ರೀರಾಮಕೃಷ್ಣರು ಬ್ರಾಹ್ಮಭಕ್ತರೊಡನೆ

‘‘ಬ್ರಾಹ್ಮಸಮಾಜದ ಷಾಣ್ಮಾಸಿಕ ಮಹೋತ್ಸವ, ಶರತ್ಕಾಲದಲ್ಲಿ ಒಮ್ಮೆ, ವಸಂತಕಾಲದಲ್ಲಿ ಒಮ್ಮೆ ಕಲಕತ್ತಕ್ಕೆ ಮೂರು ಮೈಲಿ ಉತ್ತರದಲ್ಲಿರುವ ಸಿಂಥಿಯಲ್ಲಿ ವೇಣಿಮಾಧವಪಾಲನ ಸುಂದರವಾದ ಉದ್ಯಾನದಲ್ಲಿ ನಡೆದುಕೊಂಡು ಬರುತ್ತಿದೆ. ಇಂದು ಶರತ್ಕಾಲದ ಮಹೋತ್ಸವ. ಇಲ್ಲಿನ ಉದ್ಯಾನಗೃಹ ನಿರ್ಜನ ಪ್ರದೇಶದಲ್ಲಿದೆ. ಧ್ಯಾನಕ್ಕೆ ಒಳ್ಳೆಯ ಜಾಗ; ಹೂವಿನಿಂದ ತುಂಬಿದ ಗಿಡಗಳು, ಕೊಳಗಳು, ಹುಲ್ಲುಮೈದಾನ, ಲತಾಗೃಹಗಳು ಇವೆಲ್ಲ ಉದ್ಯಾನಕ್ಕೆ ಹೆಚ್ಚು ಶೋಭೆಯನ್ನು ಕೊಟ್ಟಿವೆ. ಈಗ ತಾನೆ ಸೂರ್ಯ ಮುಳುಗುತ್ತಿದ್ದಾನೆ. ಪಶ್ಚಿಮ ದಿಗಂತದ ಮುಗಿಲು ಕೆಂಬಣ್ಣ ದುಡಿಗೆ ಉಡುತ್ತಿದೆ. ಪರಮಹಂಸರು ಇನ್ನೇನು ಇಲ್ಲಿಗೆ ಬರಲಿದ್ದಾರೆ. ಕಲ್ಕತ್ತದಿಂದಲೂ ಸುತ್ತಮುತ್ತ ಗ್ರಾಮದಿಂದಲೂ ಅನೇಕ ಭಕ್ತರು ಬಂದು ಸೇರಿದ್ದಾರೆ. ಎಲ್ಲರೂ ಪರಮಹಂಸರ ಬರುವಿಕೆಯನ್ನು ಎದುರು ನೋಡುತ್ತ ಕುಳಿತಿದ್ದಾರೆ.

‘‘ಪರಮಹಂಸರನ್ನು ಮತ್ತು ಇನ್ನು ಕೆಲವು ಭಕ್ತರನ್ನು ಕರೆತರುತ್ತಿದ್ದ ಗಾಡಿ ಸಮೀಪಿಸಿದೊಡನೆಯೇ ಇಡೀ ಸಭೆಯೇ ಎದ್ದುನಿಂತು ಅವರಿಗೆ ಸುಸ್ವಾಗತವನ್ನು ಇತ್ತಿತು. ನಾಟಕ ಶಾಲೆಯಲ್ಲಿ ಪರದೆ ಮೇಲಕ್ಕೆ ಹೋದೊಡನೆಯೇ ಯಾವ ರೀತಿಯಾದ ಶಾಂತಿಯನ್ನು ಕಾಣಬಹುದೋ ಅದೇ ರೀತಿಯಾದ ಶಾಂತಿ ತತ್‌ಕ್ಷಣವೇ ನೆಲೆಗೊಂಡಿತು. ಇದುವರೆಗೆ ಪರಸ್ಪರ ಮಾತುಕತೆಗಳನ್ನಾಡುತ್ತಿದ್ದವರೆಲ್ಲ ಪರಮಹಂಸರ ಸೌಮ್ಯ ಮುಖದ ಕಡೆಗೆ ದಿಟ್ಟಿಸಿ ನೋಡುತ್ತ ಅವರ ಬಾಯಿಂದ ಬೀಳುವ ಅಮೃತವಾಣಿಯನ್ನು ಒಂದೂ ತಪ್ಪದಂತೆ ಕೇಳಲೋಸುಗ ಅತ್ಯಂತ ಕಾತರರಾಗಿ ಕುಳಿತುಕೊಂಡಿದ್ದಾರೆ.’’

*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ೯೨)*

ಈ ಮೇಲಿನ ವಿವರಣೆಯಿಂದ ಶ್ರೀರಾಮಕೃಷ್ಣರು ಭಕ್ತರ ಸಂಗವನ್ನು ಬಯಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಯಾವುದೇ ಧಾರ್ಮಿಕ ಉತ್ಸವ ನಡೆಯುತ್ತಿರಲಿ — ಅದು ಯಾವುದೇ ಪಂಗಡಕ್ಕೆ ಸಂಬಂಧಪಟ್ಟಿರಬಹುದು-ಅವರು ಅದರಲ್ಲಿ ಭಾಗವಹಿಸಿ ಅಲ್ಲಿ ಅದ್ಭುತ ಆಧ್ಯಾತ್ಮಿಕ ಜ್ವಾಲೆಯನ್ನೇ ಹೊತ್ತಿಸುತ್ತಿದ್ದರು, ಕೇವಲ ಧಾರ್ಮಿಕ ಆಚರಣೆಯನ್ನು ತಮ್ಮ ಅನುಭವದ ಮೂಲಕ ಜೀವಂತಗೊಳಿಸುತ್ತಿದ್ದರು. ಇಲ್ಲಿ ನಾವು ಎಲ್ಲ ಧರ್ಮವನ್ನೂ ಸ್ವೀಕರಿಸುವ ಶ್ರೀರಾಮಕೃಷ್ಣರ ಉದಾರ ಭಾವವನ್ನು ಕಾಣುತ್ತೇವೆ. ಯೇಸುಕ್ರಿಸ್ತನು ಹೇಳುತ್ತಾನೆ: ‘‘ದೀಪವನ್ನು ಹಚ್ಚಿ ಯಾರೂ ಪಾತ್ರೆಯ ಕೆಳಗೆ ಇಡುವುದಿಲ್ಲ. ಅದನ್ನು ಎತ್ತರದ ಸ್ಥಳದಲ್ಲಿ ಇಡುತ್ತಾರೆ – ಅದು ಸುತ್ತಲೂ ಬೆಳಕು ಚೆಲ್ಲಲೆಂದು.’’ ಹಾಗೆಯೇ ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದು ಸೀಮಿತ ವಲಯದಲ್ಲಿ ನೆಲೆಸಲಿಲ್ಲ – ಸುತ್ತಲೂ ಬೆಳಕು ಚೆಲ್ಲಿದರು, ಎಲ್ಲ ಧರ್ಮಗಳ ಮೇಲೂ ಬೆಳಕು ಚೆಲ್ಲಿದರು, ಎಲ್ಲ ಧರ್ಮಗಳೂ ಸತ್ಯ ಎಂಬುದನ್ನು ಪ್ರಮಾಣೀಕರಿಸಿದರು. ಒಂದು ಬೃಹತ್ ಸರೋವರವು ಸುತ್ತಲೂ ಇರುವ ಹೊಲಗಳಿಗೂ ಎಲ್ಲ ಸಸ್ಯವರ್ಗಗಳಿಗೂ ನೀರನ್ನು ಒದಗಿಸುತ್ತದೆ. ಹಾಗೆಯೇ ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಅನುಭವಗಳ ಒಂದು ದೊಡ್ಡ ಸರೋವರವಿದ್ದಂತೆ – ಎಲ್ಲ ಧರ್ಮಗಳಿಗೂ ಪೌಷ್ಟಿಕತೆಯನ್ನು ನೀಡಿದರು.



### ಭಗವನ್ನಾಮದ ಮಾಹಾತ್ಮ್ಯ

**ಶ್ರೀರಾಮಕೃಷ್ಣರು:** ‘‘ನಿತಾಯ್(ನಿತ್ಯಾನಂದ) ಹೇಗಾದರೂ ಮಾಡಿ ಜನರು ಭಗವನ್ನಾಮೋಚ್ಚಾರಣೆ ಮಾಡುವಂತೆ ಮಾಡುತ್ತಿದ್ದ. ಚೈತನ್ಯದೇವ ಹೇಳುತ್ತಿದ್ದ: ‘ಭಗವನ್ನಾಮಕ್ಕೆ ಬಹಳ ಮಾಹಾತ್ಮ್ಯ. ಒಡನೆಯೇ ಫಲ ದೊರಕದೆ ಹೋಗಬಹುದು. ಆದರೆ ಒಂದಲ್ಲ ಒಂದು ದಿನ ಫಲ ದೊರತೇ ದೊರೆಯುತ್ತದೆ.’ ಇದು ಮನೆಯ ಕಾರ್ನಿೀಸಿನ ಮೇಲೆ ಬಿದ್ದಿರುವ ಬೀಜದ ಹಾಗೆ.

ಬಹಳ ಕಾಲವಾದ ಮೇಲೆ ಕಟ್ಟಡ ನೆಲಸಮವಾಗುತ್ತದೆ. ಬೀಜ ನೆಲಕ್ಕೆ ಬೀಳುತ್ತದೆ. ಕೊನೆಗೆ ಅದು ಮೊಳೆತು ಫಲ ಕೊಡುತ್ತದೆ.'' *(ಅಲ್ಲೇ, ಪು. ೯೮)*

ಶ್ರೀರಾಮಕೃಷ್ಣರು ಕೊಟ್ಟಿರುವ ಈ ಮೇಲಿನ ಉದಾಹರಣೆ ಬಹಳ ಅರ್ಥಗರ್ಭಿತವಾಗಿದೆ. ಕಟ್ಟಡ 'ನೆಲಸಮವಾಗುವುದು' ಎಂದರೆ ನಾವು ನಮ್ಮ ಕರ್ಮಫಲಗಳೆಂಬ ಇಟ್ಟಿಗೆಗಳ ಮೂಲಕ ಕಟ್ಟಿಕೊಂಡಿರುವ ವ್ಯಕ್ತಿತ್ವದ ಕಟ್ಟಡ ಮುರಿದು ಬೀಳಬೇಕು, ಭಕ್ತಿಯ ಕಣ್ಣೀರು ಸುರಿಯಬೇಕು, ವಿಚಾರದ ಬೆಳಕು (ಸೂರ್ಯ) ಅದರ ಮೇಲೆ ಬೀಳಬೇಕು, ಹಾಗೂ ಶ್ರದ್ಧೆಯ ಬೇಲಿ ಹಾಕಬೇಕು. ಆಗ ನಾಮಬೀಜ ಮೊಳೆತು ಮರವಾಗಿ ಆಧ್ಯಾತ್ಮಿಕ ಅನುಭವಗಳೆಂಬ ಫಲಪುಷ್ಪಗಳನ್ನು ನೀಡುತ್ತದೆ.

ಈ ಸಂದರ್ಭದಲ್ಲಿ ಶ್ರೀಚೈತನ್ಯರು ರಚಿಸಿದ 'ಶಿಕ್ಷಾಷ್ಟಕ'ದ ಒಂದು ಶ್ಲೋಕವನ್ನು ಉದಾಹರಿಸಬಹುದು:

**ನಾಮ್ನಾಮಕಾರಿ ಬಹುಧಾ ನಿಜಸರ್ವಶಕ್ತಿ-**
**ಸ್ತತ್ರಾರ್ಪಿತಾ ನಿಯಮಿತಃ ಸ್ಮರಣೇ ನ ಕಾಲಃ ।**
**ಏತಾದೃಶೀ ತವ ಕೃಪಾ ಭಗವನ್ ಮಮಾಪಿ**
**ದುರ್ದೈವಮೀದೃಶಮಿಹಾಜನಿ ನಾನುರಾಗಃ ॥**

''ನಿನ್ನ ನಾಮಗಳು ಹಲವು ಬಗೆಯಿಂದ ವ್ಯಕ್ತವಾಗಿವೆ; ಅವುಗಳಲ್ಲಿ ನಿನ್ನ ಸರ್ವಶಕ್ತಿಯನ್ನೂ ತುಂಬಿರುವೆ; ನಿನ್ನ ನಾಮಸ್ಮರಣೆ ಮಾಡಬೇಕಾದರೆ ಅದನ್ನು ಇಂತಹ ಕಾಲದಲ್ಲಿಯೇ ಮಾಡಬೇಕೆಂಬ ವಿಧಿಯಿಲ್ಲ; ನಿನ್ನ ಕೃಪೆ ಹೀಗಿದ್ದರೂ, ಹೇ ಭಗವಂತ, ದುರ್ದೈವ ವಶದಿಂದ ನನಗೆ ಈ ಜನ್ಮದಲ್ಲೂ ನಿನ್ನ ಮೇಲೆ ಅನುರಾಗ ಹುಟ್ಟಲಿಲ್ಲ.''

## ಮನಸ್ಸಿನ ಐದು ಅವಸ್ಥೆಗಳು

ಶ್ರೀರಾಮಕೃಷ್ಣರು: ''ಸಾತ್ತ್ವಿಕ ಸಂಸಾರಿ ಹೇಗೆ ಇರುತ್ತಾನೆ ಗೊತ್ತೆ ? ಅವನ ಮನೆ ಈ ಕಡೆ ಮುರುಕಲು. ಅದಕ್ಕೆ ಸುಣ್ಣ ಒರೆ ಮಣ್ಣು ಹಚ್ಚುವ ಬಾಬೇ ಇಲ್ಲ, ಪೂಜಾಂಗಣದಲ್ಲಿ ಪಾರಿವಾಳದ ಹಿಕ್ಕೆ ಬಿದ್ದಿರಬಹುದು, ಪ್ರಾಂಗಣವೆಲ್ಲ ಪಾಚಿಮಯವಾಗಿರಬಹುದು... ಸ್ವಾಭಾವಿಕವಾಗಿಯೇ ಆತ ಅತ್ಯಂತ ಶಾಂತಸ್ವರೂಪಿ, ಶಿಷ್ಟಾಚಾರ ಸಂಪನ್ನ, ದಯಾಳು, ನಮ್ರ; ಯಾರಿಗೂ ಯಾವ ತೊಂದರೆಯನ್ನೂ ಕೊಡುವುದಿಲ್ಲ... ಸಂಸಾರಿಗಳಲ್ಲಿ ರಾಜಸಿಕ ಪ್ರವೃತ್ತಿಯುಳ್ಳವರಿದ್ದಾರೆ. ಅವರು ಕೈಗೆ ಚೈನು ಇರುವ ಗಡಿಯಾರ ಕಟ್ಟಿರುತ್ತಾರೆ; ಬೆರಳುಗಳಿಗೆ ಎರಡು ಮೂರು ಉಂಗುರ ಹಾಕಿರುತ್ತಾರೆ. ಮನೆಮುಟ್ಟುಗಳೆಲ್ಲ ಠಾಕುಠೀಕು..... ನಾನಾ ಬಗೆಯ ಅಂದಚೆಂದದ ಉಡುಪು ಹಾಕಿಕೊಳ್ಳುತ್ತಾರೆ. ಅವನ ಸೇವಕರಿಗೂ ಒಳ್ಳೊಳ್ಳೆ ಪೋಷಾಕು ಹೀಗೆ ಇನ್ನೂ ಏನೇನೋ. ತಾಮಸಿಕ ಸಂಸಾರಿ ನಿದ್ರೆ, ಕಾಮ, ಕ್ರೋಧ, ಅಹಂಕಾರ ಇವುಗಳಿಂದ ತುಂಬಿರುತ್ತಾನೆ.'' *(ಅಲ್ಲೇ, ಪು.೯೮)*

ಪ್ರಕೃತಿಯ ಈ ಮೂರೂ ಗುಣಗಳು ಪ್ರಪಂಚದಲ್ಲಿ ಅನೇಕ ರೂಪಗಳಲ್ಲಿ ವ್ಯಕ್ತವಾಗುತ್ತವೆ. ಪತಂಜಲಿಯ ಯೋಗಸೂತ್ರ ಭಾಷ್ಯದಲ್ಲಿ ವ್ಯಾಸರು ಈ ಮೂರು ಗುಣಗಳ ಆಧಾರದ ಮೇಲೆ ಮನಸ್ಸಿನ ಐದು ಅವಸ್ಥೆಗಳನ್ನು ಗುರುತಿಸಿದ್ದಾರೆ: **ಕ್ಷಿಪ್ತ, ಮೂಢ, ವಿಕ್ಷಿಪ್ತ, ಏಕಾಗ್ರ** ಮತ್ತು **ನಿರುದ್ಧ**. ಕ್ಷಿಪ್ತಾವಸ್ಥೆಯಲ್ಲಿ ಮನಸ್ಸು ರಜಃಪ್ರಧಾನವಾಗಿದ್ದು, ತಮಸ್ಸಿನ ಪ್ರಭಾವಕ್ಕೆ ಒಳಗಾಗಿರುತ್ತದೆ ಮತ್ತು ಸತ್ತ್ವಾಂಶವು ಗೌಣವಾಗಿರುತ್ತದೆ. ಇಂತಹ ವ್ಯಕ್ತಿಯು ದುಷ್ಪ್ರವೃತ್ತಿಯುಳ್ಳವನಾಗಿರುತ್ತಾನೆ. ಮೂಢಾವಸ್ಥೆಯಲ್ಲಿ ಮನಸ್ಸು ತಮಃಪ್ರಧಾನವಾಗಿದ್ದು, ರಜಸ್ಸತ್ತ್ವಗಳು ಗೌಣವಾಗಿರುತ್ತವೆ. ಇಂತಹ ವ್ಯಕ್ತಿಗಳು ಪ್ರಮಾದಾಲಸ್ಯ ನಿದ್ರೆಯಲ್ಲಿ ಕಾಲಕಳೆಯುತ್ತಾರೆ. ವಿಕ್ಷಿಪ್ತಾವಸ್ಥೆಯಲ್ಲಿ ಮನಸ್ಸು ರಜಃಪ್ರಧಾನವಾಗಿದ್ದು, ಸತ್ತ್ವದ ಪ್ರಭಾವಕ್ಕೆ ಒಳಗಾಗಿರುತ್ತದೆ. ತಮಸ್ಸು ಗೌಣವಾಗಿರುತ್ತದೆ. ಇಂತಹ ವ್ಯಕ್ತಿಗಳು ಸತ್ಪ್ರವೃತ್ತಿಯುಳ್ಳವರಾಗಿರುತ್ತಾರೆ. ಈ ವಿಕ್ಷಿಪ್ತ ಸ್ಥಿತಿಯಲ್ಲಿ ಮನಸ್ಸು ಕೆಲವೊಮ್ಮೆ ಏಕಾಗ್ರವೂ ಶಾಂತವೂ ಆಗಿರುತ್ತದೆ. ವ್ಯಕ್ತಿ ಉತ್ತಮನಾಗಿದ್ದರೂ ಧ್ಯಾನ ದುಃಸಾಧ್ಯವಾಗಿರುತ್ತದೆ. ಏಕಾಗ್ರ ಅವಸ್ಥೆಯಲ್ಲಿ ಮನಸ್ಸು ಸತ್ತ್ವ ಪ್ರಧಾನವಾಗಿರುತ್ತದೆ, ಉಳಿದ ಗುಣಗಳು ಗೌಣವಾಗಿರುತ್ತವೆ. ಈ ಅವಸ್ಥೆಯಲ್ಲಿಯೇ ಧ್ಯಾನ ಸಾಧ್ಯವಾಗುವಂತಹುದು, ಇಲ್ಲಿಂದಲೇ ನಿಜವಾದ ಯೋಗ ಪ್ರಾರಂಭವಾಗುವುದು. ನಿರೋಧಾವಸ್ಥೆಯಲ್ಲಿ ಮನಸ್ಸು ವೃತ್ತಿಶೂನ್ಯವಾಗುತ್ತದೆ, ಮೂರೂ ಗುಣಗಳು ಸಾಮ್ಯಾವಸ್ಥೆಯಲ್ಲಿರುತ್ತವೆ.

ಸತ್ತ್ವಗುಣವು ಎಲ್ಲ ಬಗೆಯ ಜ್ಞಾನವನ್ನು ಪ್ರತಿನಿಧಿಸುತ್ತದೆ. ಈ ಗುಣವು ವ್ಯಕ್ತಿಯಲ್ಲಿ ಜ್ಞಾನದ ಹಂಬಲವನ್ನು ವೃದ್ಧಿಸುತ್ತದೆ. ಎಲ್ಲ ವಸ್ತುಗಳಲ್ಲಿರುವ ಜ್ಞೇಯಾಂಶವು (knowables) ಸತ್ತ್ವಗುಣವನ್ನು ಸೂಚಿಸುತ್ತದೆ. ಎಲ್ಲ ಬಗೆಯ ಚಲನೆ, ಕ್ರಿಯೆಗಳು ರಜಸ್ಸಿನ ಪರಿಣಾಮ. ಒಂದು ವಸ್ತುವಿನಲ್ಲಾಗುವ ಕಣಗಳ ಚಲನೆ (molecular movement) ಮತ್ತು ಬದಲಾವಣೆ ಗಳು ರಜಸ್ಸಿನ ಪರಿಣಾಮ. ಎಲ್ಲ ಬಗೆಯ ಅವ್ಯಕ್ತ ಸ್ಥಿತಿ ಮತ್ತು ಹಿಡಿದಿಟ್ಟುಕೊಳ್ಳುವುದು, ಒಂದು ವಸ್ತುವಿನಲ್ಲಿರುವ ಅವ್ಯಕ್ತ ಶಕ್ತಿ ಮತ್ತು ಅರಿವಿಗೆ ಬರದೇ ಇರುವುದು – ಇದು ತಮಸ್ಸಿನ ಪರಿಣಾಮ.

ಸತ್ತ್ವವೆಂದರೆ ವಸ್ತುವಿನ ಸತ್ಯತೆ – ವಸ್ತುವು ಅನೇಕ ಗುಣಗಳ ಮೂಲಕ ತನ್ನ ಇರುವಿಕೆಯನ್ನು ತೋರಿಸುತ್ತದೆ. ರಜಸ್ ಎಂದರೆ ಧೂಳು. ಧೂಳು ಸತ್ಯವನ್ನು ಮರೆಮಾಚಿಸುವಂತೆ, ನಿರಂತರ ಚಲನೆಯಿಂದ ಹಿಂದಿರುವ ಸತ್ಯವು ಮರೆಯಾಗುತ್ತದೆ — ದೃಶ್ಯಗಳ ಚಲನೆಯಿಂದ ಪರದೆ ಕಾಣದಿರುವಂತೆ. ತಮಸ್ಸು ಒಂದು ಅವ್ಯಕ್ತ ಸ್ಥಿತಿ. ಆದ್ದರಿಂದ ಪ್ರಲಯ ಮತ್ತು ಸುಷುಪ್ತಿಗಳು ತಮಸ್ಸಿನ ಸ್ಥಿತಿ. ಈ ಮೂರು ಗುಣಗಳನ್ನು ಮನಸ್ಸಿಗೆ ಅನ್ವಯಿಸುವುದಾದರೆ, ನಮ್ಮ ಅರಿವಿಗೆ ಬರುವ ಪ್ರಜ್ಞಾಮನಸ್ಸು ಸತ್ತ್ವವೆಂದೂ, ಮನಸ್ಸಿನ ಚಲನೆಯನ್ನು ರಜಸ್ಸೆಂದೂ, ಅಪ್ರಜ್ಞಾ ಮನಸ್ಸನ್ನು ತಮಸ್ಸೆಂದೂ ಕರೆಯಬಹುದು. ಮೂರು ಬಣ್ಣಗಳ ದಾರದಿಂದ

ತಯಾರಿಸಿದ ಬಟ್ಟೆಯಲ್ಲಿ ಬಣ್ಣಗಳು ಕಲಬೆರಕೆಯಾದಂತೆ ಕಂಡು ಬಂದರೂ ಮೂರೂ ದಾರಗಳು ಪ್ರತ್ಯೇಕವಾಗಿಯೇ ಇರುತ್ತವೆ. ಆ ಬಟ್ಟೆಯಲ್ಲಿ ಮೂರು ದಾರಗಳಲ್ಲದೆ ಬೇರೇನೂ ಇರುವುದಿಲ್ಲ. ಬಟ್ಟೆಯೆಂದರೆ ಮೂರು ದಾರಗಳ ಮಿಶ್ರಣ.

**''ಭಗವಂತ ಸಾಕಾರನೆ ಅಥವಾ ನಿರಾಕಾರನೆ?''**

ಭಕ್ತನೊಬ್ಬನು ಕೇಳಿದ ಮೇಲಿನ ಪ್ರಶ್ನೆಗೆ ಶ್ರೀರಾಮಕೃಷ್ಣರು ಉತ್ತರಿಸಿದರು:

''ಆತನ ಸಂಬಂಧವಾಗಿ, ಆತ ಕೇವಲ ಇದು ಮಾತ್ರವೇ ಎಂದು ಎಂದಿಗೂ ಹೇಳಲಾಗುವುದಿಲ್ಲ. ಆತ ನಿರಾಕಾರನೂ ಹೌದು, ಸಾಕಾರನೂ ಹೌದು. ಭಕ್ತರಿಗಾಗಿ ಆತ ಸಾಕಾರನಾಗುತ್ತಾನೆ. ಜ್ಞಾನಿಗಳಿಗೆ, ಈ ಜಗತ್ತು ಸ್ವಪ್ನವತ್ ಎಂಬ ಅಭಿಮತ ಉಳ್ಳವರಿಗೆ, ಆತ ನಿರಾಕಾರ. ಭಕ್ತನಿಗೆ ಗೊತ್ತಿದೆ ತಾನೂ ಒಂದು ವಸ್ತು, ಹಾಗೆಯೇ ಈ ಜಗತ್ತು ಕೂಡ. ಆದ್ದರಿಂದ ಭಗವಂತ ಭಕ್ತನಿಗೆ ವ್ಯಕ್ತಿರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಆದರೆ ಜ್ಞಾನಿ, ಉದಾಹರಣೆಗೆ ವೇದಾಂತವಾದಿ, ಕೇವಲ 'ನೇತಿ' 'ನೇತಿ' ಎಂಬ ವಿಚಾರದಲ್ಲಿ ತೊಡಗುತ್ತಾನೆ. ಈ ರೀತಿಯ ವಿಚಾರದಿಂದ ಜ್ಞಾನಿಯ ಅಂತರ್ದೃಷ್ಟಿಗೆ ಗೋಚರವಾಗುತ್ತದೆ, 'ಈ ''ಅಹಂ'' ಎಂಬುದೂ ಮಿಥ್ಯ. ಈ ಜಗತ್ತು ಮಿಥ್ಯಾಸ್ವಪ್ನದ ಹಾಗೆ.' ಬಳಿಕ ಜ್ಞಾನಿ ತನ್ನ ಆಂತರಿಕ ಪ್ರಜ್ಞೆಯಲ್ಲಿ ಬ್ರಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ. ಬ್ರಹ್ಮ ಏನು ಎಂಬುದನ್ನು ಆತ ಬಾಯಿಂದ ಹೇಳಲಾರ.'' *(ಅಲ್ಲೇ, ಪು. ೧೦೦)*

ಫ್ರಿಜ್‌ನಲ್ಲಿ ಇಟ್ಟದ್ದು ಬಹಳ ಕಾಲ ಉಳಿಯುತ್ತದೆ. ಹಾಗೆಯೇ ಭಕ್ತಿಯ ಶೈತ್ಯದಲ್ಲಿ ಶ್ರದ್ಧೆ ಮುಂತಾದ ಆಧ್ಯಾತ್ಮಿಕ ಗುಣಗಳೆಲ್ಲ ಉಳಿಯುತ್ತವೆ. ನಮ್ಮ ಮನಸ್ಸೇ ಒಂದು ಫ್ರಿಜ್‌ನಂತೆ. ಡೀಪ್ ಫ್ರಿಜ್‌ನಲ್ಲಿ ನೀರು ವಿವಿಧ ಆಕಾರವನ್ನು ಪಡೆಯುವಂತೆ ಭಕ್ತಿ ತೀವ್ರವಾದಾಗ ಆಯಾಯ ಮತಸ್ಥರಿಗೆ ಅನುಗುಣವಾಗಿ ಭಗವಂತನು ಶಿವ, ವಿಷ್ಣು ಮುಂತಾದ ಆಕಾರಗಳನ್ನು ಪಡೆಯುತ್ತಾನೆ. ಯಾವುದೇ ಆಕಾರವನ್ನು ಪಡೆದರೂ ನೀರು ನೀರಾಗಿಯೇ ಇರುತ್ತದೆ. ಹಾಗೆಯೇ ನಿರಾಕಾರವೂ ಸತ್ಯ, ಸಾಕಾರವೂ ಸತ್ಯ. ನೀರಿನ ನಿಜ ಸ್ವರೂಪ ನೀರೂ ಅಲ್ಲ, ಮಂಜುಗಡ್ಡೆಯೂ ಅಲ್ಲ. ಅದೇ ರೀತಿ ಭಗವಂತನ ನಿಜಸ್ವರೂಪ ಸಾಕಾರ-ನಿರಾಕಾರವನ್ನು ಮೀರಿದುದು, ಅದು ಏನೆಂದು ಹೇಳಲಾಗುವುದಿಲ್ಲ. ಪಂಚದಶಿಯಲ್ಲಿ ಇದೇ ಅಭಿಪ್ರಾಯ ವ್ಯಕ್ತವಾಗಿದೆ:

**ಕೀದೃಕ್‌ತರ್ಹೀತಿ ಚೇದ್ ಪೃಚ್ಛೇತ್ ಈದೃಕ್ತಾ ನಾಸ್ತಿ ತತ್ರ ಹಿ ।**
**ಯದನೀದೃಗತಾ ದೃಕ್ ಚ ತತ್ಸ್ವರೂಪಂ ವಿನಿಶ್ಚಿನು ॥** *(೩.೨೬)*

'' 'ಹಾಗಾದರೆ ಆತ್ಮನ ಸ್ವರೂಪವು ಎಂಥದು?' ಎಂದು ನೀನು ಕೇಳಿದರೆ ಅದು ಇಂಥದೆಂದು ಹೇಳಲಾಗುವುದಿಲ್ಲ – ಎಂಬುದು ನಮ್ಮ ಉತ್ತರ. ಯಾವುದು ಇಂಥದೂ ಅಲ್ಲವೊ ಅಂಥದೂ ಅಲ್ಲವೊ ಆ ಸ್ವರೂಪವನ್ನು ನಿಶ್ಚಯಿಸಿಕೊ.''

**'ಅಹಂ'ಗೆ ಅಸ್ತಿತ್ವವಿಲ್ಲ**

ಶ್ರೀರಾಮಕೃಷ್ಣರು: ''ವಿಚಾರದಲ್ಲಿ ಮುಂದುವರಿಯುತ್ತ ಮುಂದುವರಿಯುತ್ತ ಹೋದರೆ ಕೊನೆಗೆ 'ಅಹಂ' ಏನೂ ಉಳಿದುಕೊಳ್ಳದು. ಉದಾಹರಣೆಗೆ ಈರುಳ್ಳಿ ಹೊರಗಿನ ಕೆಂಪು ಸಿಪ್ಪೆ ತೆಗೆದ ನಂತರ ಮಂದವಾಗಿರುವ ಬಿಳಿಸಿಪ್ಪೆ ಕಾಣಿಸಿಕೊಳ್ಳುತ್ತದೆ. ಅದನ್ನು ಒಂದಾದ ಮೇಲೊಂದು ತೆಗೆಯುತ್ತ ಹೋದರೆ ಒಳಗೆ ಏನೂ ಕಾಣಿಸದು.'' *(ಅಲ್ಲೇ, ಪು. ೧೦೧)*

ನೀರಿನ ಸುಳಿ ಎಂಬ ಪ್ರತ್ಯೇಕ ವಸ್ತುವೊಂದಿಲ್ಲ. ಅದೇ ರೀತಿ ಆಲೋಚನೆಗಳ ಸುಳಿಯೇ 'ಅಹಂ'. ಈ ಪದದಲ್ಲಿ ಎರಡು ಅಕ್ಷರಗಳಿವೆ: 'ಅ'ಕಾರ ಮತ್ತು 'ಹಂ' ಕಾರ. ಇದರಲ್ಲಿ 'ಅ'ಕಾರವು ಭಗವಂತನನ್ನು ಸೂಚಿಸುತ್ತದೆ. ಹೇಗೆಂದರೆ **ಅಕ್ಷರಾಣಾಂ 'ಅ'ಕಾರೋಽಸ್ಮಿ** – ಅಕ್ಷರಗಳಲ್ಲೆಲ್ಲ 'ಅ'ಕಾರನು ನಾನು ಎಂದು ಭಗವಂತನು ಗೀತೆಯಲ್ಲಿ ಹೇಳಿದ್ದಾನೆ. 'ಹಂ'ಕಾರವು 'ನಾನು' ಎಂಬುದನ್ನು ಸೂಚಿಸುತ್ತದೆ. ಅಂದರೆ 'ನಾನು' ಎಂಬುದರ ಮೂಲ ಭಗವಂತನೇ – ನಮ್ಮೊಳಗಿರುವ ಆತ್ಮತತ್ತ್ವವೇ. ಅಹಂಕಾರದ ಬಗ್ಗೆ 'ವಿವೇಕಚೂಡಾಮಣಿ'ಯ ಒಂದು ಶ್ಲೋಕವನ್ನು ನೆನಪಿಸಿಕೊಳ್ಳಬೇಕು:

**ಭಾನುಪ್ರಭಾಸಂಜನಿತಾಭ್ರಪಂಕ್ತಿಃ**
**ಭಾನುಂ ತಿರೋಧಾಯ ವಿಜೃಂಭತೇ ಯಥಾ ।**
**ಆತ್ಮೋದಿತಾಹಂಕೃತಿರಾತ್ಮತತ್ತ್ವಂ**
**ತಥಾ ತಿರೋಧಾಯ ವಿಜೃಂಭತೇ ಸ್ವಯಮ್ ॥** *(೧೪೨)*

''ಸೂರ್ಯಪ್ರಭೆಯಿಂದಲೇ ಹುಟ್ಟಿದ ಮೋಡವು ಸೂರ್ಯನನ್ನೇ ಮುಚ್ಚಿ ತಾನೇ ಮೆರೆಯುವಂತೆ, ಆತ್ಮದಿಂದಲೇ ಹುಟ್ಟಿದ ಅಹಂಕೃತಿಯು ಆತ್ಮತತ್ತ್ವವನ್ನೇ ಮುಸುಕಿ ತಾನೇ ಮೆರೆಯುತ್ತದೆ.''

ವರ್ಣಮಾಲೆಯು 'ಅ'ಕಾರದಿಂದ ಪ್ರಾರಂಭಿಸಿ 'ಹ'ಕಾರದಲ್ಲಿ ಕೊನೆಗೊಳ್ಳುತ್ತದೆ. ಪ್ರಪಂಚದ ಎಲ್ಲ ವಸ್ತುಗಳ ಹೆಸರುಗಳೂ ಈ ಅಕ್ಷರಗಳಲ್ಲೇ ಅಡಕವಾಗಿವೆ. ಆದ್ದರಿಂದ 'ಅಹಂ' ಇಡೀ ಪ್ರಪಂಚವನ್ನೇ ಪ್ರತಿನಿಧಿಸುತ್ತದೆ ಎಂದು ಹೇಳಬಹುದು. ಪ್ರಪಂಚ ನಿಂತಿರುವುದೇ ಅಹಂ ಮೇಲೆ. ಅದು ಹೋದರೆ ಎಲ್ಲ ಹೋದಂತೆ. ಅಹಂಕಾರವೆಂಬ ನಿದ್ರೆಯಿಂದ ಎಚ್ಚೆತ್ತಾಗ ಸತ್ಯ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಸ್ವಾರಸ್ಯಕರವಾದ ಕಥೆಯಿದೆ:

**ಶಿಷ್ಯ :** ಭಗವಂತನನ್ನು ಪಡೆಯಲು ಏನು ಸಾಧನೆ ಮಾಡಬೇಕು?

**ಗುರು:** ಸೂರ್ಯೋದಯವಾಗಬೇಕಾದರೆ ನೀನೇನಾದರೂ ಮಾಡಬೇಕೇನು?

**ಶಿಷ್ಯ :** ಹಾಗಾದರೆ ಈ ಆಧ್ಯಾತ್ಮಿಕ ಸಾಧನೆಗಳ ಉದ್ದೇಶ?

**ಗುರು:** ಸೂರ್ಯೋದಯವಾದಾಗ ನೀನು ಎಚ್ಚೆತ್ತಿರಬೇಕಲ್ಲವೆ!? ಅದಕ್ಕಾಗಿ. *(Rule of Benedict, p.26)*

**(ಮುಂದುವರಿಯುವುದು)**